

# ‘ಕ್ರೇಜಿ’ ದಿಲೀಪ್!

ರಾಜ್ಯದಲ್ಲಿ ಮಳೆ ಋತು ಕ್ಷೀಣವಾಗಿದ್ದರೂ ಗಾಂಧಿನಗರದಲ್ಲಿ ಪ್ರತಿಭೆಗಳ ಪ್ರವಾಹಕ್ಕಂತೂ ಕ್ಷಾಮ ಬಂದಂತಿಲ್ಲ. ಚಿತ್ರರಂಗದಲ್ಲಿ ನೆಲೆಕಂಡುಕೊಳ್ಳುವ ಕನಸುಗಾರರ ಸಂಖ್ಯೆ ಹೆಚ್ಚುತ್ತಲೇ ಇದೆ. ಈ ಸಾಲಿಗೆ ಹೊಸ ಸೇರ್ಪಡೆ ದಿಲೀಪ್ ಪ್ರಕಾಶ್.

ಆರು ಅಡಿ ಎತ್ತರದ ದಿಲೀಪ್ ನಾಯಕನಾಗಿ ಚಿತ್ರರಂಗದಲ್ಲೇ ನೆಲೆ ಕಂಡುಕೊಳ್ಳಬೇಕು ಎನ್ನುವ ಹಂಬಲ ಹೊಂದಿದವರು. ತಮ್ಮ ದಾರಿ ಸುಲಭವಾದುದಲ್ಲ ಎನ್ನುವ ಅರಿವು ಹಾಗೂ ಅಂದುಕೊಂಡಿದ್ದನ್ನು ಸಾಧಿಸಲು ಶ್ರಮಪಡಲು ಸಿದ್ಧ ಎನ್ನುವ ಛಲ ಎರಡನ್ನೂ ದಿಲೀಪ್ ಹೊಂದಿರುವಂತಿದೆ. ಎಂಜಿನಿಯರಿಂಗ್ ಓದಿರುವ ದಿಲೀಪ್, ‘ನಾನು ನಟನೆಯನ್ನೇ ವೃತ್ತಿಯಾಗಿಸಿಕೊಳ್ಳುವೆ’ ಎಂದು ಆತ್ಮವಿಶ್ವಾಸದಿಂದ ಹೇಳುತ್ತಾರೆ.

ಮಾಲಾಶ್ರೀ ಅವರ ‘ಮಹಾಕಾಳಿ’ ಚಿತ್ರದ ಪುಟ್ಟ ಪಾತ್ರವೊಂದರಲ್ಲಿ ನಟಿಸಿದ್ದ ದಿಲೀಪ್, ಈಗ ಚಿತ್ರಮಂದಿರಗಳಲ್ಲಿ ಇರುವ ‘ಕ್ರೇಜಿ ಬಾಯ್’ ಚಿತ್ರದ ಮೂಲ ಪೂರ್ಣ ಪ್ರಮಾಣದ ನಾಯಕನಾಗಿ ಚಿತ್ರರಂಗಕ್ಕೆ ಪರಿಚಯಗೊಂಡಿದ್ದಾರೆ. ಮಹೇಶ್‌ಬಾಬು ನಿರ್ದೇಶನದ ಈ ಚಿತ್ರದಲ್ಲಿ, ಸಾಕಷ್ಟು ಸಾಹಸ ದೃಶ್ಯಗಳು ಹಾಗೂ ನೃತ್ಯ ಸೇರಿದಂತೆ ಹೊಸ ಹೀರೊ ಒಬ್ಬನನ್ನು ಸಹೃದಯರಿಗೆ ಪರಿಚಯಿಸುವ ಎಲ್ಲ ಅಂಶಗಳೂ ಇವೆಯಂತೆ. ಮಕ್ಕಳನ್ನು ತಿದ್ದುವಂತೆ ಮಹೇಶ್‌ಬಾಬು ಅವರು ನಟನೆಯ ಪಾಠಗಳನ್ನು ಹೇಳಿಕೊಟ್ಟಿದ್ದನ್ನು ದಿಲೀಪ್ ಕೃತಜ್ಞತೆಯಿಂದ ನೆನಪಿಸಿಕೊಳ್ಳುತ್ತಾರೆ. ಅಂದ ಹಾಗೆ, ರವಿಶಂಕರ್, ಆಶಿಕಾ, ಪವನ್, ಸಾಧು ಕೋಕಿಲ ಹಾಗೂ ರಂಗಾಯಣ ರಘು ‘ಕ್ರೇಜಿ ಬಾಯ್’ ಚಿತ್ರದ ತಾರಾಗಣದಲ್ಲಿರುವ ಪ್ರಮುಖರು. ಶೇಖರ್ ಚಂದ್ರ ಛಾಯಾಗ್ರಹಣ ಹಾಗೂ ಜೆಸ್ಸಿ ಗಿಫ್ಟ್ ಸಂಗೀತ ಈ ಚಿತ್ರಕ್ಕಿದೆ.


“ಗಣಪನ ಹಬ್ಬ”

ವೈಭವ – ವೈವಿಧ್ಯತೆ – ವಿನೂತನ

Plan to visit any of our Stores, be Happy



Silks, Cotton & Salwars

Prasiddhi® SILKS

A renowned name for well known sarees

Showrooms @

K.H. Road Ph: 22236613 | M.G. Road Ph: 25580433 | Marathahalli 9448288522/12

Bannerghatta Road Ph: 26689345 | Commercial Street Ph: 25321545 | Domlur Ph: 41511156